**Code No. 20 X**

### ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ — ಪ್ರಥಮ ದರ್ಜೆ — ಪ್ರಥಮ ಪತ್ರಿಕೆ

## ವೇಗ

ಜನವರಿ, 2014

ವೇಳೆ { ಉಕ್ತಲೇಖನ : 10 ನಿಮಿಷಗಳು
ಲಿಪಿ ಬರಹ : 1 ಗಂಟೆ 30 ನಿಮಿಷಗಳು

ಪರಮಾವಧಿ ಅಂಕಗಳು : 100

***ಓದುವವರಿಗೆ ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು ಒಂದು ನಿಮಿಷಕ್ಕೆ ಇನ್ನೂರು ಅಕ್ಷರಗಳ ವೇಗದಲ್ಲಿ ಪ್ರಶ್ನೆ ಪತ್ರಿಕೆಯಲ್ಲಿ ಸೂಚಿಸಿದ ರೀತಿ ಓದತಕ್ಕದ್ದು.

2) ಉಕ್ತಲೇಖನ ಮುಗಿದ ನಂತರ ಅಭ್ಯರ್ಥಿಗಳು ಅವರ ಶೀಘ್ರಲಿಪಿಯನ್ನು ಕನ್ನಡ ಲಿಪಿಗೆ ಪರಿವರ್ತನೆ ಮಾಡಿ ಬರೆಯಲು ಸೂಚಿಸತಕ್ಕದ್ದು.

---

ಮಾನ್ಯ ಅಧ್ಯಕ್ಷರೇ,

ಸನ್ಮಾನ್ಯ ರಾಜ್ಯಪಾಲರು ಮಂಡಿಸಿರುವ
ಭಾಷಣವನ್ನು ಅನುಮೋದಿಸುತ್ತಾ ನನ್ನ ಕೆಲವು
$\frac{1}{4}$ ಮಾತುಕತೆಗಳನ್ನು ಹೇಳುವುದಕ್ಕೆ ಇಷ್ಟಪ/ಡುತ್ತೇನೆ.
ಮಿನಿ ವಿಧಾನಸೌಧದಲ್ಲಿ ನೋಂದಣಿ ಕಚೇರಿಗೆ
ಸ್ಥಳಾವಕಾಶ ಇಲ್ಲದಿರುವ ಕಡೆ ಉಪ
ನೋಂದಣಾಧಿಕಾರಿಗಳ ಕಚೇರಿ ಕಟ್ಟಡದ
$\frac{1}{2}$ ನಿರ್ಮಾ/ಣಕ್ಕಾಗಿ ಸರ್ಕಾರ ಮೂರು ಕೋಟಿ
ರೂಪಾಯಿಗಳನ್ನು ಒದಗಿಸಲು ಉದ್ದೇಶಿಸಿದೆ.
ನೋಂದಣಿ ದಾಖಲೆಗಳ ಗಣಕೀಕರಣ ಕಾರ್ಯಕ್ಕಾಗಿ
$\frac{3}{4}$ ಕೂಡ ಬೆಂಬಲ ಒ/ದಗಿಸಲಾಗುವುದು.

ಕಟ್ಟಡ ನಿರ್ಮಾಣಕಾರರು ಮತ್ತು ಆಸ್ತಿ
ಅಭಿವೃದ್ಧಿದಾರರಿಂದ ಸರ್ಕಾರಿ ಜಮೀನಿನ
ಅತಿಕ್ರಮಣ ಪ್ರಕರಣಗಳು ವಿಶೇಷವಾXಗಿ 1
ಬೆಂಗಳೂರು ನಗರದಲ್ಲಿ ಒಂದು ತೊಂದರೆಯಾಗಿ
ಪರಿಣಮಿಸಿದೆ. ಹಕ್ಕುಪತ್ರ ಕಳೆದುಕೊಂಡ
ಅಮಾಯಕ ಸಾರ್ವಜನಿಕರು ತೊಂದರೆ
ಅನುಭವಿಸು/ತ್ತಿದ್ದಾರೆ. ಕಾನೂನನ್ನು ಗೌರವಿಸುವ $\frac{1}{4}$
ಜಮೀನು ಮತ್ತು ವಸತಿ ಗೃಹಗಳ ಅಭಿವೃದ್ಧಿದಾರರು
ಆಸ್ತಿ ಹಕ್ಕು ಪತ್ರದ ಸಿಂಧುತ್ವದ ಬಗ್ಗೆ ಉದ್ದೇಶಿತ
ಖರೀ/ದಿದಾರರಿಗೆ ಮನವರಿಕೆ ಮಾಡಿಕೊಡಲು $\frac{1}{2}$
ಕಷ್ಟಪಡುತ್ತಿದ್ದಾರೆ. ವಸತಿ ಸಂಕೀರ್ಣಗಳಲ್ಲಿ ಮನೆ,
ನಿವೇಶನವನ್ನು ಖರೀದಿಸುವವರು ಆಸ್ತಿ ಒಡೆ/ತನ $\frac{3}{4}$
ಪತ್ರದ ನ್ಯಾಯಬದ್ಧ ಸಿಂಧುತ್ವದ ಬಗ್ಗೆ

[ Turn over

ಚಿಂತಿಸುತ್ತಾರೆ. ಪೂರ್ಣವಾದ ಮತ್ತು ನ್ಯಾಯವಾದ
ಸಿಂಧುತ್ವದ ಮಾಹಿತಿಯ ಕೊರತೆಯಿಂದ
2 ಬಂಡವಾಳ ಹೂಡಿಕೆXಯ ನಿರ್ಧಾರಗಳು
ಮುಂದೂಡಲ್ಪಡುತ್ತವೆ. ದಾಖಲೆ ಪತ್ರಗಳ
ನ್ಯಾಯಬದ್ಧತೆಯನ್ನು ದೃಢಪಡಿಸಿಕೊಳ್ಳಲು ಅಪಾರ
4 ಹಣ ಖರ್ಚಾಗುತ್ತದೆ. ಗೃಹ ನಿರ್ಮಾಣ/ಕ್ಕೆ ಸಾಲ
ನೀಡುವ ಸಂಸ್ಥೆಗಳು ಸಹ ನ್ಯಾಯಬದ್ಧ ಹಕ್ಕುಪತ್ರಗಳ
ಸಿಂಧುತ್ವ ಖಾತ್ರಿಪಡಿಸಿಕೊಳ್ಳಲು ಅಪಾರ ಹಣ ವೆಚ್ಚ
$\frac{1}{2}$ ಮಾಡುತ್ತಿವೆ. ಈ ಅಡೆತಡೆಗ/ಳನ್ನು ನಿವಾರಿಸಲು
ನಾನು ಈ ಎರಡು ಕ್ರಮಗಳನ್ನು ಜಾರಿಗೊಳಿಸಲು
ಉದ್ದೇಶಿಸಿದ್ದೇನೆ.

ನಮ್ಮ ಸರ್ಕಾರವು ಆಸ್ತಿ ಹಕ್ಕಿನ ವಿಮಾ ಪತ್ರದ
$\frac{3}{4}$ ವ್ಯವಸ್ಥೆಯ/ನ್ನು ಜಾರಿಗೊಳಿಸಲು ಉದ್ದೇಶಿಸಿದೆ.
ಆಸ್ತಿ ವಿಮೆಯನ್ನು ಹೊಂದಿರುವ ಎಲ್ಲಾ ಆಸ್ತಿಗಳ
ನೋಂದಣಿಗೆ ಶೇಕಡಾ ಹತ್ತರಷ್ಟು ಮುದ್ರಾಂಕ
3 ಶುಲ್ಕ ರಿಯಾಯತಿ ನೀಡXಲು ಉದ್ದೇಶಿಸಿದೆ.

ಬೆಂಗಳೂರು ನಗರದಲ್ಲಿನ ಅಭಿವೃದ್ಧಿದಾರರು,
ಕಟ್ಟಡ ನಿರ್ಮಾಣಗಾರರು ಮತ್ತು ಮನೆಮಾಲೀಕರ
1 ಹಾಗೂ ಆಸ್ತಿಯ ವಿವರಗಳ/ನ್ನು ಒಳಗೊಂಡ
ಮಾಹಿತಿ ಭಂಡಾರವನ್ನು ಖಾಸಗಿ ಮತ್ತು
ಸಾರ್ವಜನಿಕ ಸಹಭಾಗಿತ್ವದ ಮಾದರಿಯಲ್ಲಿ
ಸ್ಥಾಪಿಸಲು ನಾವು ಉದ್ದೇಶಿಸಿದ್ದೇವೆ. ಈ ಮಾಹಿತಿ/ $\frac{1}{2}$
ಭಂಡಾರವು ನಿರ್ದಿಷ್ಟ ಅಭಿವೃದ್ಧಿದಾರರು ಅಥವಾ
ಕಟ್ಟಡ ನಿರ್ಮಾಣಗಾರರು ಅಥವಾ ಮನೆ ಮಾಲೀಕರು
ಘೋಷಿಸಿಕೊಳ್ಳುವ ಮಾಹಿತಿಯನ್ನು ಉದ್ದೇಶಿತ/ $\frac{3}{4}$
ಖರೀದಿದಾರರಿಗೆ ಒದಗಿಸಲಿದೆ. ಆಸ್ತಿ ಹಕ್ಕಿನ ವಿಮಾ
ಪತ್ರದ ರಕ್ಷಣೆಯನ್ನು ಹೊಂದಿರುವ ಆಸ್ತಿಗಳ ಬಗ್ಗೆ
ಎಲ್ಲಾ ವಿವರ ಮತ್ತು ಮಾಹಿತಿಗಳುX 4
ಲಭ್ಯವಿರುವುದರಿಂದ ಸಹಜವಾಗಿ ಇದು ಆಸ್ತಿ
ವ್ಯವಹಾರಗಳನ್ನು ಸುಲಲಿತಗೊಳಿಸುತ್ತದೆ.

ಇನ್ನು ಸರ್ಕಾರಿ ಆಸ್ಪತ್ರೆಗಳನ್ನು
ಅವಲಂಬಿಸುವ/ವರು ಬಹುತೇಕ ಬಡಜನರಾಗಿ $\frac{1}{4}$
ರುತ್ತಾರೆ. ನಮ್ಮ ಹಲವಾರು ಆಸ್ಪತ್ರೆಗಳ
ಹೊರರೋಗಿ ವಿಭಾಗಗಳು ಸರ್ಕಾರಿ ಕಚೇರಿಗಳಂತೆ
ಬೆಳಿಗ್ಗೆ ಒಂಭತ್ತು/ರಿಂದ ಸಂಜೆ ಐದರವರೆಗೆ ಮಾತ್ರ $\frac{1}{2}$
ಕಾರ್ಯನಿರ್ವಹಿಸುತ್ತವೆ. ಇದು ದುಡಿಯುವ ಜನರು
ಮತ್ತು ಕಚೇರಿಗೆ ಹೋಗುವ ಜನರು ಕೆಲಸಕ್ಕೆ
ಹೋಗುವ ಸಮ/ಯವಾಗಿರುತ್ತದೆ. ಅವರು $\frac{3}{4}$
ಕೆಲಸದಿಂದ ವಾಪಸ್ಸು ಬರುವ ವೇಳೆಗೆ ಹೊರರೋಗಿ
ವಿಭಾಗಗಳು ಮುಚ್ಚಿರುತ್ತವೆ. ಹೀಗಾಗಿ ನಮ್ಮ
ಆಸ್ಪತ್ರೆ ವ್ಯವಸ್ಥೆ ಗರಿXಷ್ಠ ಪ್ರಮಾಣದಲ್ಲಿ 5
ಬಳಕೆಯಾಗುತ್ತಿಲ್ಲ.

ಆದ್ದರಿಂದ ನಮ್ಮ ಆಸ್ಪತ್ರೆಗಳನ್ನು ಗರಿಷ್ಠ
ಪ್ರಮಾಣದಲ್ಲಿ ಬಳಸಿಕೊಳ್ಳಲು ಮೂವತ್ತು ಹಾಸಿಗೆ
$\frac{1}{4}$ ಹಾಗೂ ಅದಕ್ಕಿಂ/ತ ಹೆಚ್ಚಿನ ಹಾಸಿಗೆ
ಸಾಮರ್ಥ್ಯವುಳ್ಳ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ
ಸಂಜೆಯ ಹೊರರೋಗಿ ವಿಭಾಗಗಳನ್ನು ತೆರೆಯಲು
$\frac{1}{2}$ ಉದ್ದೇಶಿಸಲಾಗಿದೆ. ಈ ವಿಭಾ/ಗಗಳು ಸಂಜೆ
ಐದರಿಂದ ರಾತ್ರಿ ಎಂಟರವರೆಗೆ ಕಾರ್ಯ
ನಿರ್ವಹಿಸಲಿವೆ. ಸರ್ಕಾರಿ ಆಸ್ಪತ್ರೆಯ ಎಲ್ಲಾ ವೈದ್ಯರು
$\frac{3}{4}$ ವಾರದಲ್ಲಿ ಗರಿಷ್ಠ ಐದು ದಿನ ಸಂಜೆ/ ಹೊರರೋಗಿ
ವಿಭಾಗದಲ್ಲಿ ಕಾರ್ಯನಿರ್ವಹಿಸಬೇಕು. ಈ
ವಿಭಾಗದಲ್ಲಿ ಕಾರ್ಯನಿರ್ವಹಿಸುವ ವೈದ್ಯರಿಗೆ ಪ್ರತಿ
6 ದಿನಕ್ಕೆ ಮೂರುನೂರು ರೂಪಾಯಿಗಳ ಹೆಚ್ಚುXವರಿ
ಗೌರವ ಧನವನ್ನು ನೀಡಲಾಗುವುದು. ಇದೇ ರೀತಿ
ದಾದಿಯರಿಗೆ ಪ್ರತಿ ದಿನಕ್ಕೆ ನೂರು ರೂಪಾಯಿಗಳ
$\frac{1}{4}$ ಹೆಚ್ಚುವರಿ ಗೌರವ ಧನವನ್ನು ನೀಡಲಾ/ಗುವುದು.
ಸಂಬಂಧಿಸಿದ ಆಸ್ಪತ್ರೆಯ ಆಡಳಿತ ವೈದ್ಯರು
ಮತ್ತು ವೈದ್ಯಾಧಿಕಾರಿಗಳು ಸಂಜೆ
ಹೊರರೋಗಿಯ ವಿಭಾಗದಲ್ಲಿ ಕರ್ತವ್ಯ
$\frac{1}{2}$ ನಿರ್ವಹಿಸಲು ಸಿಬ್ಬಂ/ದಿಗಳನ್ನು ನಿಯೋಜಿಸಬೇಕು.
ಸಂಜೆ ಹೊರರೋಗಿ ಸೇವೆಯು ವೈದ್ಯರುಗಳಿಗೆ
ಸ್ವಯಂ ಪ್ರೇರಣೆ ಸೇವೆಯಾಗಿರುತ್ತದೆ. ಈ
ವಿಧಾನದಿಂದ ಆಸ್ಪತ್ರೆಗೆ ಬರುವ/ ರೋಗಿಗಳ ಸಂಖ್ಯೆ $\frac{3}{4}$
ಹೆಚ್ಚುವ ಸಾಧ್ಯತೆ ಇದೆ. ಇದಕ್ಕಾಗಿ ಅನುದಾನವನ್ನು
ಒದಗಿಸಲಾಗಿದೆ ಎಂದು ತಿಳಿಸುತ್ತಾ ಈ ನನ್ನ
ಭಾಷಣವನ್ನು ಮುಗಿಸುತ್ತೇನೆ.X 7

ನಾರಾಯಣಪ್ಪನವರು,
ಅನುಪಮ ವಸ್ತ್ರಾಲಯ, ವಿದ್ಯಾನಗರ,
ವಿಜಯನಗರ, ಬೆಂಗಳೂರು.

ಮಾನ್ಯರೇ,

ನೀವು ದಿನಾಂಕ ಹದಿನೈದನೇ ಏಪ್ರಿಲ್
ಎರಡು/ ಸಾವಿರದ ಹತ್ತರಂದು ಬರೆದ ಪತ್ರ ಮತ್ತು $\frac{1}{4}$
ಅದರೊಂದಿಗೆ ಕಳುಹಿಸಿದ ಮೂವತ್ತೈದು ಸಾವಿರ
ರೂಪಾಯಿಗಳ ಬೇಡಿಕೆ ಹುಂಡಿಯು ತಲುಪಿದೆ.
ಅದಕ್ಕಾ/ಗಿ ನಿಮಗೆ ನಮ್ಮ ಹೃತ್ಪೂರ್ವಕ $\frac{1}{2}$
ವಂದನೆಗಳು. ನಿಮ್ಮಿಂದ ಇನ್ನೂ ಹದಿನೈದು ಸಾವಿರ
ರೂಪಾಯಿ ಬರಬೇಕಾಗಿದೆ. ಅದರ ಬಗ್ಗೆ ನಿಮ್ಮ
ಪತ್ರದಲ್ಲಿ ಏನೂ ತಿ/ಳಿಸಿರುವುದಿಲ್ಲ. ಮೇಲಿನ $\frac{3}{4}$
ಹಣವನ್ನು ಆದಷ್ಟು ಜಾಗ್ರತೆಯಾಗಿ
ಕಳುಹಿಸಿಕೊಡುತ್ತೀರೆಂದು ನಂಬಿದ್ದೇನೆ. ನೀವು
ನಿಮ್ಮ ಪತ್ರದಲ್ಲಿ ನಿಮಗೆ ಇನ್ನೂ ನಾಲ್ಕು ಸಾXವಿರ 8
ಉತ್ತಮ ದರ್ಜೆಯ ಪ್ಯಾಂಟ್‌ಪೀಸ್‌ಗಳು
ಬೇಕೆಂದು ಬರೆದಿದ್ದೀರಿ. ಆದರೆ ಈಗ ನಮ್ಮ
ಕಾರ್ಖಾನೆಯ ನೌಕರರು ಬೇಡಿಕೆ ಸಲ್ಲಿಸಿ ಮುಷ್ಕರ

$\frac{1}{4}$ ಮಾಡುತ್ತಿರು/ವುದರಿಂದ ನಿಮ್ಮ ಬೇಡಿಕೆಯನ್ನು ತಕ್ಷಣ ಈಡೇರಿಸಲು ಸಾಧ್ಯವಿಲ್ಲವೆಂದು ಹೇಳಲು ವಿಷಾದಿಸುತ್ತೇವೆ. ಈಗ ನಮ್ಮಲ್ಲಿ ಕೆಲವು
$\frac{1}{2}$ ಪ್ಯಾಂಟ್‌ಪೀಸ್‌ಗಳು ದಾಸ್ತಾ/ನಿವೆ. ನೀವು ನಿಮ್ಮ ಪ್ರತಿನಿಧಿಯನ್ನು ಕಳುಹಿಸಿ ಪ್ಯಾಂಟ್‌ಪೀಸ್‌ಗಳನ್ನು ಆರಿಸಿದ ನಂತರ ಸುಮಾರು ಎರಡು ಸಾವಿರ
$\frac{3}{4}$ ಪ್ಯಾಂಟ್‌ಪೀಸ್‌ಗಳನ್ನು ಕಳುಹಿಸ/ಲು ಸೂಕ್ತ ವ್ಯವಸ್ಥೆ ಮಾಡುತ್ತೇವೆ. ನಮ್ಮ ಕಾರ್ಖಾನೆ ನೌಕರರ ಬೇಡಿಕೆಯನ್ನು ಈಡೇರಿಸಲು ಇನ್ನು ಕೆಲವೇ ದಿನಸಗಳಲ್ಲಿ ಪ್ರಯತ್ನ ಮಾಡುತ್ತೇವೆಂದು
9 ಭರXವಸೆ ಕೊಟ್ಟಿದ್ದೇವೆ. ನೌಕರರು ಕೆಲಸಕ್ಕೆ ಹಾಜರಾದ ನಂತರ ಉಳಿದ ಎರಡು ಸಾವಿರ ಪ್ಯಾಂಟ್‌ಪೀಸ್‌ಗಳನ್ನು ಕಳುಹಿಸಲು ಸೂಕ್ತ ವ್ಯವಸ್ಥೆ
ಮಾಡುತ್ತೇ/ವೆ ಮತ್ತು ತಮಗೆ ತೊಂದರೆ $\frac{1}{4}$
ಆಗಿದ್ದರೆ ವಿಷಾದಿಸುತ್ತೇವೆ.

ನಾವು ನಿಮಗೆ ಹಿಂದಿನ ಸಾರಿ ಕಳುಹಿಸಿದ
ಪ್ಯಾಂಟ್‌ಪೀಸ್‌ಗಳಲ್ಲಿ ಕೆಲವು ಪ್ಯಾಂಟ್‌ಪೀಸ್‌ಗಳು/ $\frac{1}{2}$
ಉತ್ಪಾದನಾ ತಪ್ಪುಗಳಿಂದ ಕೂಡಿದ್ದುದಾಗಿ ತಿಳಿಸಿದ್ದೀರಿ. ತಾವು ದಯವಿಟ್ಟು ಆ ಪ್ಯಾಂಟ್‌ಪೀಸ್‌ಗಳನ್ನು ಹಿಂದಕ್ಕೆ ಕಳುಹಿಸಿಕೊಟ್ಟರೆ
ನಾವು ತಕ್ಷಣ ಬೇರೆ/ ಪ್ಯಾಂಟ್‌ಪೀಸ್‌ಗಳನ್ನು $\frac{3}{4}$
ಕಳುಹಿಸಲು ವ್ಯವಸ್ಥೆ ಮಾಡುತ್ತವೆ.

ನಮ್ಮ ನಿಮ್ಮ ವ್ಯಾಪಾರ ಸಂಬಂಧ ಇದೇ ರೀತಿ ಮುಂದುವರೆಯಲೆಂದು ಹಾರೈಸುತ್ತೇನೆ.

ತಮ್ಮ ವಿಶ್ವಾಸಿX 10